**<u>ಸಾಕ್ಷಿಯನ್ನು ದಿನಾಂಕ: 10-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲು 9 ನೇ ಪ್ರತಿವಾದಿ ಪರ ವಕೀಲರಾದ ಶ್ರೀ MH ರವರಿಂದ</u>**

**1.** ದಾವಾ ಆಸ್ತಿ ಬೇಕೆಂದು ವಾದಿಗಳು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸುಮಾರು 25-30 ವರ್ಷಗಳಿಂದ ವಾದಿಗಳು ಪರಿಚಯ ನನಗೆ ಇರುತ್ತದೆ. ದುರ್ಗಪ್ಪರವರ ತಂಗಿಯರನ್ನು ನಮ್ಮ ಗ್ರಾಮಕ್ಕೆ ಕೊಟ್ಟು ವಿವಾಹ ಮಾಡಿರುವ ಕಾರಣ ವಾದಿಗಳ ಪರಿಚಯ ನನಗೆ ಇರುತ್ತದೆ. ವಾದಿಗಳು ಈ ದಾವೆಯನ್ನು ಸರ್ವೆ ನಂ. 42/1 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಹಳೆ ಸರ್ವೆ ನಂ.11 ಒಟ್ಟು 12 ಎಕರೆ ವಿಸ್ತೀರ್ಣ ಇದ್ದು ಆ ಪೈಕಿ ದುರ್ಗಪ್ಪನವರಿಗೆ 2 ಎಕರೆ 20 ಗುಂಟೆ ಕ್ರಯವಾಗಿರುತ್ತದೆ. ಸದರಿ ಸರ್ವೆ ನಂಬರಿಗೆ ಸಂಬಂಧಿಸಿದಂತೆ ನಾನು ಕ್ರಯ ಪತ್ರವನ್ನು ನೋಡಿರುತ್ತೇನೆ. ಸರ್ವೆ ನಂ.11, 42 ಮತ್ತು 43 ಬೇರೆ ಬೇರೆ ಸರ್ವೆ ನಂಬರುಗಳು ಎಂದರೆ ಹಳೆ ಸರ್ವೆ ನಂ. 11 ಪೊಡಿ ಆಗಿ ಸರ್ವೆ ನಂ.42/1 ಮತ್ತು 42/2 ಆಗಿರುತ್ತದೆ, ಆ ಬಗ್ಗೆ ಎಂ ಆರ್.ಸಂಖ್ಯೆ 5/1979-80 ರಂತೆ ದಾಖಲೆಗಳನ್ನು ನೋಡಿರುತ್ತೇನೆ. ಸರ್ವೆ ನಂ.11 ರಲ್ಲಿ 4 ಎಕರೆ 20 ಗುಂಟೆ, ಸರ್ವೆ ನಂ.42 ರಲ್ಲಿ 1 ಎಕರೆ 34 ಗುಂಟೆ ಮತ್ತು ಸರ್ವೆ ನಂ.42 ರಲ್ಲಿ 7 ಎಕರೆ 2 ಗುಂಟೆ RRT Dis 3/1989-90 ರ ಆದೇಶದಂತೆ ಕೆಂಜಿಗಪ್ಪನವರ ಹೆಸರಿಗೆ MR 1/1989-90 ರಂತೆ ಹಕ್ಕು ನಿಗದಿಯಾಗಿರುತ್ತದೆಂದರೆ ಸರಿ. ಕೆಂಜಿಗಪ್ಪನವರು ಮೃತ ಪಟ್ಟ ನಂತರ ಸರ್ವೆ ನಂ.42/1 ರ ಖಾತೆಯು ಕೆಂಜಿಗಪ್ಪನವರ ವಾರಸುದಾರರ ಹೆಸರಿಗೆ ಎಂ ಆರ್ 9/1998-90 ರಂತೆ ಖಾತೆ ಬದಲಾವಣೆ ಆಗಿರುತ್ತದೆಂದರೆ ಸರಿ. ನಂತರ 1 ನೇ ಪ್ರತಿವಾದಿ ಸದರಿ ಆಸ್ತಿಯನ್ನು 9 ನೇ ಪ್ರತಿವಾದಿ ಹೆಸರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ. 9 ನೇ ಪ್ರತಿವಾದಿ ಹೆಸರಿಗೆ ಆದ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ. ಕ್ರಯ ಪತ್ರದ ಆಧಾರದ ಮೇಲೆ 09 ನೇ ಪ್ರತಿವಾದಿ ಹೆಸರಿಗೆ ಎಂ ಆರ್. ಸಂಖ್ಯೆ 3/1999-2000 ರಂತೆ ಖಾತೆ ಬದಲಾವಣೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಅಂದಿನಿಂದಲೂ ಇದೂವರೆಗೂ ಸರ್ವೆ ನಂ 42/1 ರ 1 ಎಕರೆ 34 ಗುಂಟೆ ವಿಸ್ತೀರ್ಣದಲಿ 9 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದು, ಬೋರ್ ವೆಲ್ ನು ಕೊರೆಸಿ, ಅಡಿಕೆ ತೋಟ ಬೆಳೆಸಿರುತ್ತಾರೆಂದರೆ ಸರಿಯಲ್ಲ. ಸದರಿ ಆಸ್ತಿಯ ಖಾತೆಯು 9 ನೇ ಪ್ರತಿವಾದಿ ಹೆಸರಿಗೆ ಬರುತ್ತಿರುತ್ತದೆಂದರೆ ಸರಿಯಲ್ಲ. ಸದರಿ ಸರ್ವೆ ನಂಬರಿನ ಆಸ್ತಿಗೆ ಸಂಬಂಧಿಸಿದಂತೆ 9 ನೇ ಪ್ರತಿವಾದಿ ಬ್ಯಾಂಕಿನಲ್ಲಿ ಸಾಲವನ್ನು ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ.

2. ದುರ್ಗಪ್ಪನವರ ಹೆಸರಿಗಾದ ಕ್ರಯಪತ್ರದಲ್ಲಿ ಕಾಣಿಸಿರುವ ಆಸ್ತಿ ಚೆಕ್ಕುಬಂದಿ ನನಗೆ ಗೊತ್ತು. ಈ ದಾವೆ ಹಾಗೂ ದಾವಾ ಆಸ್ತಿಗೆ ಸಂಬಂಧಿಸಿದಂತೆ ನನಗೆ ಏನೂ ಗೊತ್ತಿಲ್ಲದೇ ಇದ್ದರೂ ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳು ಸ್ವಾಧೀನ ಅನುಭವದಲ್ಲಿರುವುದಿಲ್ಲ, 9 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ.

**<u>ಪಾಟೀಸವಾಲು 10 ನೇ ಪ್ರತಿವಾದಿ ಕಾನೂನು ಬದ್ಧ ವಾರಸುದಾರರ ಪರ ವಕೀಲರಾದ ಶ್ರೀ HRR ರವರಿಂದ</u>**

1. ಹಳೆ ಸರ್ವೆ ನಂ.11 ಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಸರ್ವೆ ನಂಬರ ಪೊಡಾಗಿ ಸರ್ವೆ ನಂ.42/1 ಮತ್ತು 42/2 ಆಗಿರುತ್ತದೆ. ಸರ್ವೆ ನಂ.42/1 ರಲ್ಲಿ ಹಂಚಿಹಳ್ಳಿ ದುರ್ಗಪ್ಪನವರು ಸ್ವಾಧೀನದಲ್ಲಿರುತ್ತಾರೆ. ದಿನಾಂಕ 28-04-2004 ರಂದು 10 ನೇ ಪ್ರತಿವಾದಿಯು ಲಕ್ಷ್ಮಮ್ಮ ಕೋಂ ಹುಚ್ಚಪ್ಪನವರು ಸರ್ವೆ ನಂ.42 /1 ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಹಳ್ಳ ಮತ್ತು ಪುಟ್ಟಬಾಳಯ್ಯ ಹಾಗೂ ಅಶ್ವಥಪ್ಪರವರ ಜಮೀನು, ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ತಿಮ್ಮಲಕ್ಷ್ಮಮ್ಮ ರವರ ಜಮೀನು ಮತ್ತು ವೆಂಕರಾಮಣರವರ ಜಮೀನು, ದಕ್ಷಿಣಕ್ಕೆ ಸಿದ್ದ ಹನಮಯ್ಯ ಮತ್ತು ನಾರಾಯಣಪ್ಪ ರವರ ಜಮೀನು ಬರುತ್ತದೆಂದರೆ ಸರಿಯಲ್ಲ. ತದನಂತರ 10 ನೇ ಪ್ರತಿವಾದಿಯು ಸದರಿ ಆಸ್ತಿಗೆ ಸಂಬಂಧಿಸಿದಂತೆ ಅವರ ಮಕ್ಕಳಾದ ಎ ಹೆಚ್ ಜಗದೀಶ ಮತ್ತು ಗಂಗರಾಜು ರವರ ಹೆಸರಿಗೆ ದಿನಾಂಕ 12-07-2013 ರಂತೆ ನೊಂದಾಯಿತ ದಾನ ಪತ್ರವನ್ನು ಬರೆದಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಜಗದೀಶ ಮತ್ತು ಗಂಗರಾಜು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ವಾದಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**